3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ

ಎಸ್.ಸಿ.ಸಂಖ್ಯೆ 260/2023:

ಫಿರ್ಯಾದಿ : ಮಹಿಳಾ ಪೊಲೀಸ್ ಠಾಣೆ ಹಾಸನ

:ವಿರುದ್ಧ:

ಆರೋಪಿತರು : ಸುಗತ್ ಮತ್ತು ಇನ್ನೊಬ್ಬರು

:ದೋಷಾರೋಪಣೆ:

ಶ್ರೀ ಆನಂದ 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಧೀಶನಾದ ನಾನು ಆರೋಪಿತರಾದ:

| | |
|---|---|
| ಆ.1 | ಸುಗತ್ ಬಿನ್ ಜಯರಾಜ್ ವಯ್ಯಸ್ಸು 25 ವರ್ಷ, ವಾಸ ಕಿರುವಾಲ ಗ್ರಾಮ, ಬೆಳಗೋಡು ಹೋಬಳಿ, ಸಕಲೇಶಪುರ ತಾಲ್ಲೂಕು |
| ಆ.2 | ಜಯರಾಜ್ ಬಿನ್ ಸಿದ್ದಯ್ಯ , ವಯ್ಯಸ್ಸು 55 ವರ್ಷ, ವಾಸ ಕಿರುವಾಲ ಗ್ರಾಮ, ಬೆಳಗೋಡು ಹೋಬಳಿ, ಸಕಲೇಶಪುರ ತಾಲ್ಲೂಕು |

ನಿಮ್ಮ ವಿರುದ್ದ ಹೊರೆಸಿರುವ ದೋಷಾರೋಪಣೆ ಏನೆಂದರೆ:

1. ಈಗ್ಗೆ ಸುಮಾರು 3 ವರ್ಷಗಳ ಹಿಂದೆ ಚಾ ಸಾ 1ಚಂದನ ಹೆಚ್. ಆರ್ ಹಾಗೂ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀನು ಒಬ್ಬರನ್ನೊಬ್ಬರು ಪ್ರಿತಿಸುತ್ತಿದ್ದು, ನಿಮ್ಮಗಳ ಪ್ರೀತಿಯನ್ನು ಎರಡೂ ಮನೆಯವರು ಒಪ್ಪಿ , ನಂತರ ದಿನಾಂಕ: 01-03-2023 ರಂದು ಹಿಂದೂ ಸಂಪ್ರದಾಯದಂತೆ ಹಾಸನದ ರಾಮದೇವರ ಹಳ್ಳದ ದೇವಸ್ಥಾನದಲ್ಲಿ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನಿನ್ನ ಮದುವೆಯನ್ನು ಚಾ ಸಾ 1 ರವರೊಂದಿಗೆ ಹಿಂದೂ ಸಂಪ್ರದಾಯದಂತೆ ಮಾಡಿಕೊಟ್ಟಿದ್ದು , ಮದುವೆಯಾದ ನಂತರ ಒಂದನೇ ಆರೋಪಿಯಾದ ನೀನು ಸಮಾನ ಉದ್ದೇಶದಿಂದ ಚಾ ಸಾ 1 ರವರಿಗೆ ಪ್ರತಿ ದಿನ ಅವಾಚ್ಯ ಶಬ್ದದಿಂದ ಬೈದು ನಿಂದಿಸಿ ಕೈಗಳಿಂದ ಹೊಡೆದು ನಿನ್ನ ತವರು ಮನೆಯಿಂದ ವರದಕ್ಷಿಣೆ ಹಣವನ್ನು ತರಬೇಕು ಎಂದು ಹಾಗೂ 2ನೇ ಆರೋಪಿಯಾದ ನೀನು ಸಾಕ್ಷಿ.1 ರವರಿಗೆ ನೀನು ಯಾವುದೇ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬರದೆ ಪುಕ್ಕಟೆಯಾಗಿ ನಮ್ಮ ಮನೆಗೆ ಬಂದಿದ್ದೀಯಾ ಎಂದು ಅವಾಚಉ ಶಬ್ದಗಳಿಂದ ಬೈದು, ಈ ಸಂಬಂಧ 1ನೇ ಆರೋಪಿಗೆ ಸಾಕ್ಷಿ.1 ರವರಿಗೆ ಹೆಚ್ಚಿನ ವರದಕ್ಷಿಣೆ ತರುವಂತೆ ಹಿಂಸೆ ನೀಡಲು ಕುಮ್ಮಕ್ಕು ನೀಡಿದ್ದು, ಆರೋಪಿತರಾದ ನೀವಿಬ್ಬರೂ ಸಾಕ್ಷಿ.1 ರವರಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡುತ್ತಿದ್ದು ,ಆ ನಿಮಿತ್ತದಿಂದ ಆರೋಪಿತರಾದ ನೀವು, ಭಾ.ದಂ.ಸಂ.ಕಲಂ.498(ಎ) ಸಹವಾಚಕ 114 ಹಾಗೂ 34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವೆ.

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಸಮಾನ ಉದ್ದೇಶದಿಂದ ಚಾ ಸಾ 1 ರವರಿಗೆ ಕೈಗಳಿಂದ ಹೊಡೆದು ಹಾಗೂ ನಂತರ ದಿನಾಂಕ:24-03-2023 ರಂದು ಸಂಜೆ 6:30 ಗಂಟೆ ಸಮಯದಲ್ಲಿ 1 ನೇ ಆರೋಪಿಯಾದ ನೀನು ಚಾ ಸಾ 1 ರವರನ್ನು ಮನೆಯಿಂದ ಆಚೆಗೆ ಎಳೆದುಕೊಂಡು ಬಂದು ನೀನು ಸತ್ತು ಹೋಗು ಎಂದು ಕೈಗಳಿಂದ ಹೊಡೆದು ನೋವುಂಟು ಮಾಡಿದ್ದು, ಆ ನಿಮಿತ್ತದಿಂದ 1 ನೇ ಆರೋಪಿಯಾದ ನೀನು ಭಾ.ದಂ.ಸಂ.ಕಲಂ.323 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವೆ.

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಸಮಾನ ಉದ್ದೇಶದಿಂದ ಚಾ ಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿದ್ದು ಹಾಗೂ ನಂತರ ದಿನಾಂಕ:24-03-2023 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಮೇಲ್ಕಂಡ ಇಬ್ಬರೂ ಆರೋಪಿಗಳಾದ ನೀವುಗಳು ಸಮಾನ ಉದ್ದೇಶವನ್ನು ಹೊಂದಿ ಚಾ ಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಾಗೂ ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀನು ಚಾ ಸಾ 1 ರವರನ್ನು ಉದ್ದೇಶಿಸಿ ನೀನು ಯಾವುದೇ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬರದೆ ಪುಕ್ಕಟ್ಟೆಯಾಗಿ ನಮ್ಮ ಮನೆಗೆ ಬಂದಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಕಿರುಕುಳ ನೀಡುತ್ತಿದ್ದು ಹಾಗೂ ನಂತರ ದಿನಾಂಕ:13-04-2023 ರಂದು ರಾತ್ರಿ 11-00 ಗಂಟೆಯಲ್ಲಿ ಮೇಲ್ಕಂಡ ಇಬ್ಬರೂ ಆರೋಪಿಗಳಾದ ನೀವುಗಳು ಚಾ ಸಾ 1 ರವರಿಗೆ ನೀನು ಪದೇ ಪದೇ ನಿನ್ನ ತವರು ಮನೆಗೆ ಫೋನ್ ಮಾಡಿ ಎಲ್ಲಾ ವಿಚಾರವನ್ನು ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಸೂಳೇ ಮುಂಡೆ ಬೇವರ್ಸಿ ಮುಂಡೆ ಎಂದು ಬಾಯಿಗೆ ಬಂದಂತೆ ಬೈದು ಅವಮಾನ ಪಡಿಸಿ ನಿಂದಿಸಿದ್ದು ಇದರಿಂದ ಚಾ ಸಾ 1 ರವರು ಸಾರ್ವಜನಿಕ ಶಾಂತಿಗೆ ಭಂಗ ತರುವಂತೆ ಮಾಡಿದ್ದು , ಆ ನಿಮಿತ್ತದಿಂದ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ.504 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

4. ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀನು ಸಮಾನ ಉದ್ದೇಶದಿಂದ ಚಾ ಸಾ 1 ರವರನ್ನು ಉದ್ದೇಶಿಸಿ ನಿನ್ನ ತವರು ಮನೆಯಿಂದ ವರದಕ್ಷಿಣೆ ಹಣವನ್ನು ತರಬೇಕು ಎಂದು ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀನು ಚಾ ಸಾ 1 ರವರ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಲು ಪ್ರಯತ್ನ ಮಾಡಿ ಹೊಡೆದು ನೋವುಂಟು ಮಾಡಿದ್ದಲ್ಲದೆ ನಂತರ ದಿನಾಂಕ:13-04-2023 ರಂದು ರಾತ್ರಿ 11-00 ಗಂಟೆಗೆ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀನು ಸಮಾನ ಉದ್ದೇಶದಿಂದ ಚಾ ಸಾ 1 ರವರಿಗೆ ಪದೇ ಪದೇ ನಿನ್ನ ತವರು ಮನೆಗೆ ಫೋನ್ ಮಾಡಿ ಎಲ್ಲಾ ವಿಚಾರವನ್ನು ಹೇಳುತ್ತೀಯಾ ಎಂದು ಚಾ ಸಾ 1 ರವರ ಕುತ್ತಿಗೆ ವೇಲ್ ಹಾಕಿ ಉಸಿರುಗಟ್ಟಿಸಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಆ ನಿಮಿತ್ತದಿಂದ 1 ನೇ ಆರೋಪಿಯಾದ ನೀನು ಭಾ.ದಂ.ಸಂ.ಕಲಂ.307 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವೆ.

5. ಐದನೆಯದಾಗಿ ದಿನಾಂಕ:24-03-2023 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಚಾ ಸಾ 1 ರವರನ್ನು ಉದ್ದೇಶಿಸಿ ನಿನ್ನ ಮದುವೆಯಾಗಿ ಒಂದೂವರೆ ತಿಂಗಳು ಆದರೂ ಸಹಾ ನೀನು ನಿನ್ನ ತವರು ಮನೆಯಿಂದ ವರದಕ್ಷಿಣೆ ಹಣವನ್ನು ತಂದಿಲ್ಲ ಎಂದು ಚಾ ಸಾ 1 ರವರಿಗೆ ಊಟ ತಿಂಡಿಯನ್ನು ಕೊಡದೆ ಮನೆಯೊಳಗಿನ ಕೊಠಡಿಯೊಳಗೆ ಕೂಡಿ ಹಾಕಿದ್ದು, ಆ ನಿಮಿತ್ತದಿಂದ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.342 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

6. ಆರನೇಯದಾಗಿ, ಮೇಲೆ ಹೇಳಿದ ದಿನ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ, ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಮ್ಮಗಳ ಪೈಕಿ 1ನೇ ಆರೋಪಿಯಾದ ನೀನು ಸಾಕ್ಷಿ.1 ರವರನ್ನು ಮನೆಯಿಂದ ಆಚೆಗೆ ಎಳೆದುಕೊಂಡು ಬಂದು ನೀನು ಸತ್ತು ಹೋಗು ಎಂದು ಕೊಲೆ ಬೆದರಿಕೆ ಹಾಕಿ, ಸಾಕ್ಷಿ.1 ರವರಿಗೆ ಭಯ ಮತ್ತು ಆತಂಕ ಉಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ 34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

7. ಏಳನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಚಾ ಸಾ 1 ರವರಿಗೆ ನಿನ್ನ ತವರು ಮನೆಯಿಂದ ವರದಕ್ಷಿಣೆ ಹಣವನ್ನು ತರುವಂತೆ ಒತ್ತಾಯ ಮಾಡಿ ಹಿಂಸಿಸಿದ್ದು, ಆ ನಿಮಿತ್ತದಿಂದ ಆರೋಪಿತರಾದ ನೀವುಗಳು ವರದಕ್ಷಿಣೆ ನಿಷೇಧ ಕಾಯ್ದೆ ಕಲಂ.4 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

ಮೇಲೆ ಹೇಳಿದ ಆರೋಪವು ನನ್ನ ಸಂಜ್ಞೆಗೆ ಒಳಪಡುತ್ತದೆ ಹಾಗೂ ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಕ್ಕೆ ಅಧಿವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

(ಶ್ರೀ ಆನಂದ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಸನ.

ದಿನಾಂಕ 17-11-2025